**ಚಾಸಾ-2 ಪ್ರಾಸಾ-2**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ.3291/2018**

| | |
|---|---|
| **ಸಾಕ್ಷಿದಾರರ ಹೆಸರು** | ವೆಂಕಟೇ ಗೌಡ, |
| **ತಂದೆಯ ಹೆಸರು** | ರಂಗಪ್ಪ, |
| **ವಯಸ್ಸು** | 70 ವರ್ಷ |
| **ಉದ್ಯೋಗ** | ನಿವೃತ್ತ ಶಿಕ್ಷಕ, |
| **ವಾಸ** | ಚೆನ್ನಸಂದ್ರ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 05.02.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಒಂದನೇ ಆರೋಪಿ ನನ್ನ ಮಗಳ ಗಂಡ ಅಂದರೆ ನನ್ನ ಅಳಿಯ. ಎರಡನೇ ಆರೋಪಿ ಗೊತ್ತು. ಚಾಸಾ-1 ರವರು ನನ್ನ ಎರಡನೇ ಮಗಳು. 2009 ರಲ್ಲಿ ಚಾಸಾ-1 ರವರನ್ನು ಒಂದನೇ ಆರೋಪಿಯ ಜೊತೆ ಮದುವೆ ಮಾಡಿಕೊಟ್ಟಿರುತ್ತೇನೆ. ಒಂದನೇ ಆರೋಪಿ ಮತ್ತು ಚಾಸಾ-1 ರವರ ದಾಂಪತ್ಯದ ಫಲವಾಗಿ ಒಂದು ಹೆಣ್ಣು ಮಗು ಜನನವಾಗಿರುತ್ತದೆ. ಚಾಸಾ-1 ರವರು ಹೆರಿಗೆಗಾಗಿ ನಮ್ಮ ಮನೆಗೆ ಬಂದಿದಾಗ, ಪ್ರಸ್ತುತ ಎರಡನೇ ಆರೋಪಿಯ ಕಡೆಯಿಂದ ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂದಪಟ್ಟಂತೆ ಬಂಗಾರ ಪೇಟೆ ನ್ಯಾಯಾಲಯದಿಂದ ಒಂದು ಸಮನ್ಸ್ ಬಂದಿರುತ್ತದೆ. ನಂತರ ನಾವು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡು ಪ್ರಕರಣವನ್ನು ಮುಂದುವರೆಯಿಸಿರುತ್ತೇವೆ. ಸದರಿ ಪ್ರಕರಣದಲ್ಲಿ ನಮ್ಮ ಪರವಾಗಿ ತೀರ್ಮಾನವಾಗಿರುತ್ತದೆ. ಚಾಸಾ-1 ಮತ್ತು ಒಂದನೇ ಆರೋಪಿಯ ನಡುವೆ ಸಾಂಸರಿಕ ಜೀವನದಲ್ಲಿ ಗಲಾಟೆ ಬಂದಿರುತ್ತದೆ. ನಂತರ ನಾನು 2017 ರಲ್ಲಿ ಆರೋಪಿತರ ವಿರುದ್ದ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ಸದರಿ ಚೆಕ್ಕಿಗೆ ಸಂಬಂದಪಟ್ಟಂತೆ ಎಫ್.ಎಸ್.ಎಲ್ ವರದಿಗೆ ಸಲ್ಲಿಸಿದ್ದು ಸದರಿ ವರದಿಯಲ್ಲಿ ವಿವಾದಿತ ಚೆಕ್ಕಿನ ಮೇಲಿರುವ ಸಹಿಯು ಫೋರ್ಜರಿಯಾಗಿದೆ ಎಂದು ವರದಿಯಾಗಿತ್ತು. ನಂತರ ನನ್ನ ಮಗಳು ಕೌಟುಂಬಿಕ ನ್ಯಾಯಾಲಯದಲ್ಲಿ ಒಂದನೇ ಆರೋಪಿಯ ವಿರುದ್ದ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು 2023 ರಲ್ಲಿ ನನ್ನ ಮಗಳಿಗೆ

**ಚಾಸಾ-2 ಪ್ರಾಸಾ-2**

ವಿವಾಹ ವಿಚ್ಛೇದನವಾಗಿರುತ್ತದೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಅವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ.ಕೆ ಎಂಎಂ ಎರಡನೇ ಆರೋಪಿ ಪರಃ**

ನನ್ನ ಮಗಳು, ಒಂದನೇ ಆರೋಪಿ ಮತ್ತು ಎರಡನೇ ಆರೋಪಿತರ ನಡುವೆ ಯಾವ ಯಾವ ವ್ಯವಹಾರಗಳು ನಡೆದಿವೆ ಎಂದು ನನಗೆ ಚೆಕ್ ಬೌನ್ಸ್ ಪ್ರಕರಣ ಸಮನ್ಸ್ ಬರುವವರೆಗೂ ಗೊತ್ತಿರಲಿಲ್ಲ ಎಂದರೆ ಸರಿ. ಚೆಕ್ಕಿನಲ್ಲಿ ಸಹಿಯನ್ನು ನನ್ನ ಮಗಳು ಮಾಡಿರುತ್ತಾಳೋ ಅಥವಾ ಒಂದನೇ ಆರೋಪಿ ಮಾಡಿರುತ್ತಾನೋ ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿಯು ನನಗೆ ನ್ಯಾಯಾಲಯದಲ್ಲಿ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ನನ್ನ ಹೇಳಿಕೆಯ ಪ್ಯಾರ ನಂ.4 ದಲ್ಲಿ ಹೇಳಿರುವಂತೆ ನನ್ನ ಅಳಿಯ ಅಂದರೆ ಒಂದನೇ ಆರೋಪಿಯೇ ನನ್ನ ಮಗಳ ಸಹಿಯನ್ನು ಸಿಟಿ ಬ್ಯಾಂಕಿನ ಒಂದು ಚೆಕ್ಕಿನ ಮೇಲೆ ಸಹಿ ಮಾಡಿ ಕೋಲಾರದ ಕಡೆಯ ತನ್ನ ಪರಿಚಯಸ್ತನಾದ ಎನ್.ವಿ.ಅಶ್ವತ್ ನಾರಾಯಣ ರೆಡ್ಡಿ ರವರಿಗೆ ಕೊಟ್ಟಿದ್ದ ಎಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ಮಗಳು ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ ನಂತರ ನಾನು ಈ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಆರೋಪಿತರ ಮೇಲೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ದಿನಾಂಕ ನೆನಪಿಲ್ಲ ಎಂದು ಹೇಳುತ್ತಾರೆ. ಎರಡನೇ ಆರೋಪಿಯು ಬಂಗಾರ ಪೇಟೆ ನ್ಯಾಯಾಲಯಲ್ಲಿ ಸಲ್ಲಿಸಿದ್ದ ಚೆಕ್ ಬೌನ್ಸ್ ಪ್ರಕರಣವೂ ವಜಾ ಗೊಂಡಿದ್ದು, ಸದರಿ ತೀರ್ಪಿನ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ನ್ಯಾಯಾಲಯದಿಂದ ನಮಗೆ ನೋಟಿಸ್ ಬಂದಿದ್ದು, ಅದರಲ್ಲಿ ನಾವು ವಕೀಲರನ್ನು ಸಹ ನೇಮಕ ಮಾಡಿಕೊಂಡಿದ್ದೇವು ಎಂದರೆ ಸರಿ.

2. ಒಂದು ಆರೋಪಿ ಮತ್ತು ಚಾಸಾ-1 ರವರ ನಡುವೆ ವಿವಾಹ ವಿಚ್ಛೇದನ ಸಂಬಂಧ ಪ್ರಕರಣದ ಇತ್ಯರ್ಥಕ್ಕಾಗಿ ಮಧ್ಯಸ್ಥಿಕೆ ಕೇಂದ್ರದಲ್ಲಿ ಬಾಕಿ ಇದ್ದ ಸಂದರ್ಭದಲ್ಲಿ ಒಂದನೇ ಆರೋಪಿಯು ನಾನು ಎರಡನೇ ಆರೋಪಿಗೆ ಕೊಡಬೇಕಾಗಿದ್ದ ಹಣವನ್ನು ಕೊಡುತ್ತೇನೆ ಎಂದು ಒಪ್ಪಿಕೊಂಡಿರುತ್ತಾನೆ ಎಂದರೆ ಸರಿ. ದಿ.13.01.2023 ರಂದು ನನ್ನ ಮಗಳು ಮತ್ತು ಒಂದನೇ ಆರೋಪಿಯು ಸೇರಿ

ಒಪ್ಪಿಕೊಂಡು ವಿವಾಹ ವಿಚ್ಛೇದನ ಪಡೆದುಕೊಂಡು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣದಲ್ಲಿ ನಮ್ಮ ಪರ ವಕೀಲರು ಪ್ರಕರಣವನ್ನು ವಾಪಸ್ ತೆಗೆದುಕೊಳ್ಳುವುದಕ್ಕಾಗಿ ಮೆಮೋ ಆಫ್ ವಿಥ್ ಡ್ರಾ ಗೆ ಸಹಿಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮಗಳು ಮತ್ತು ಒಂದನೇ ಆರೋಪಿಯು ಎರಡನೇ ಆರೋಪಿಯ ಬಳಿ ಹಣಕಾಸಿನ ವ್ಯವಹಾರ ಮಾಡಿ ಒಂದು ಚೆಕ್ಕನ್ನು ಕೊಟ್ಟಿದ್ದರು, ಆ ವಿಚಾರ ನನಗೆ ಗೊತ್ತಿರಲಿಲ್ಲ ಮತ್ತು ನನ್ನ ಮಗಳು ಒಂದನೇ ಆರೋಪಿಯ ವಿರುದ್ಧ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು ನಾನು ಉದ್ದೇಶಪೂರ್ವಕವಾಗಿ ಆರೋಪಿತರ ಮೇಲೆ ಸುಳ್ಳು ನನ್ನ ಮಗಳು ಪ್ರಕರಣವನ್ನು ದಾಖಲಿಸಿರುತ್ತಾಳೆ ಎಂದರೆ ಸಾಕ್ಷಿಯು ಆರೋಪಿತರು ಮತ್ತು ನನ್ನ ಮಗಳ ನಡುವೆ ನಡೆದ ಹಣಕಾಸಿನ ವಿಚಾರ ನನಗೆ ಗೊತ್ತಿಲ್ಲ. ಆದರೆ ಚೆಕ್ ಬೌನ್ಸ್ ಪ್ರಕರಣದಲ್ಲಿ ನನಗೆ ಸಮನ್ಸ್ ಬಂದ ನಂತರ ವಿಚಾರ ತಿಳಿಯಿತು ಎಂದು ಹೇಳುತ್ತಾರೆ. ಮಧ್ಯಸ್ಥಿಕೆ ಕೇಂದ್ರದಲ್ಲಿ ಒಂದನೇ ಆರೋಪಿಯು ಎರಡನೇ ಆರೋಪಿಗೆ ಕೊಡಬೇಕಾಗಿದ್ದ ಹಣವನ್ನು ಕೊಟ್ಟು ನಾನು ಪ್ರಕರಣ ವನ್ನು ಇತ್ಯರ್ಥ ಮಾಡಿಕೊಳ್ಳುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿ. ಆದರೆ ಆ ಕಾರಣ ಕ್ಕಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇದ್ದ ಪ್ರಕರಣವನ್ನು ನನ್ನ ಮಗಳು ಮತ್ತು ಒಂದನೇ ಆರೋಪಿಯು ವಾಪಸ್ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಆ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3. ಎಫ್.ಎಸ್.ಎಲ್ ವರದಿಗಾಗಿ ನನ್ನ ಮಗಳು ಬ್ಯಾಂಕಿನಲ್ಲಿ ಸ್ಪೆಸಿಮನ್ ಸಿಗ್ನೇಚರ್ ಮತ್ತು ಚೆಕ್ಕಿನ ಸಹಿಯನ್ನು ಕಳುಹಿಸಿಕೊಡಲಾಗಿತ್ತೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ವಿವಾದಿತ ಚೆಕ್ಕಿನಲ್ಲಿ ಸಹಿಯನ್ನು ಒಂದನೇ ಆರೋಪಿ ಮಾಡಿರುತ್ತಾನೆ ಎಂದು ನನಗೆ ನ್ಯಾಯಾಲಯದಲ್ಲಿ ಗೊತ್ತಾಗಿರುತ್ತದೆ. ಸಾಕ್ಷಿ ಮುಂದುವರೆದು ಸದರಿ ಚೆಕ್ಕಿನಲ್ಲಿದ್ದ ಸಹಿ ನನ್ನ ಮಗಳಾದ್ದಾಗಿರುವುದಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಒಂದನೇ ಆರೋಪಿಯು ತುಂಬಾ ಸಾಲ ಮಾಡಿಕೊಂಡಿದ್ದು, ಆಗ ಸದರಿ ಸಾಲವನ್ನು ತೀರಿಸಲು ನನ್ನ ಮಗಳ ಚೆಕ್ಕನ್ನು ಎರಡನೇ ಆರೋಪಿಗೆ ಒಂದನೇ ಆರೋಪಿಯು ಕೊಟ್ಟಿರುತ್ತಾನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಚೆಕ್ಕನ್ನು ನನ್ನ ಮಗಳು ಎರಡನೇ ಆರೋಪಿಗೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಎರಡನೇ ಆರೋಪಿಗೆ

**ಚಾಸಾ-2 ಪ್ರಾಸಾ-2**

ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಆತನ ವಿರುದ್ದ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**